## ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.
## ಸಿ.ಸಿ ನಂಃ **674/ 2021**

| | | |
|---|---|---|
| ಸಾಕ್ಷಿಯ ಹೆಸರುಃ | ಶ್ರೀ ಶಿವಶರಣಪ್ಪ | ಫ್ರಾಸಾಃ 01 |
| ತಂದೆ ಹೆಸರುಃ | ಸಂಗಣ್ಣ | ಚಾಸಾಃ 03 |
| ವಯಸ್ಸುಃ | 35 ವರ್ಷ | ದಿಃ 03-09-2025 |
| ಉದ್ಯೋಗಃ | ಅಬಕಾರಿ ಪೇದೆ<br>DCEIB ಯಾದಗಿರಿ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಯಾದಗಿರಿ | |

ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು 2018 ರಿಂದ ಆಗಸ್ಟ್ 2025 ವರೆಗೆ ಯಾದಗಿರಿಯ ಅಬಕಾರಿ ಇಲಾಖೆಯಲ್ಲಿ ಅಬಕಾರಿ ಪೇದೆಯಾಗಿ ಸೇವೆ ಸಲ್ಲಿಸಿದ್ದೇನೆ.

ದಿನಾಂಕ 08.03.2021 ರಂದು ಮಃ 01.30 ಕ್ಕೆ ನಾನು ಕಚೇರಿ ಕರ್ತವ್ಯದಲ್ಲಿ ಇದ್ದಾಗ ಚಾಸಾಃ 1 ರವರು ನನ್ನನ್ನು ಕರೆದು ಕುಂಟಿಮರಿ ಚೆಕ್ ಪೋಸ್ಟ್ ಹತ್ತಿರ ಅಕ್ರಮ ಸೇಂದಿ ಸಾಗಾಟ ನಡೆದಿರುವ ಬಗ್ಗೆ ನಮಗೆ ಖಚಿತ ಬಾತ್ಮಿ ಬಂದಿದೆ ಎಂದು ತಿಳಿಸಿದ್ದರು. ನಂತರ ನಾನು ಹಾಗೂ ಚಾಸಾಃ 1 ಮತ್ತು 2 ರವರು ಇಲಾಖಾ ವಾಹನದಲ್ಲಿ ಮಃ 2.40 ಗಂಟೆಗೆ ಸ್ಥಳಕ್ಕೆ ಹೋಗಿದ್ದೆವು. ಅಲ್ಲಿ ಯಾರು ಪಂಚರು ಸಿಗದ ಕಾರಣ ಚಾಸಾಃ 1 ರವರು ನನ್ನನ್ನು ಮತ್ತು ಚಾಸಾಃ 2 ರವರನ್ನು ಪಂಚರನ್ನಾಗಿ ನೇಮಕ ಮಾಡಿಕೊಂಡಿದ್ದರು. ನಂತರ ಚಾಸಾಃ 1 ರವರು ಸ್ಥಳದಲ್ಲಿ ಶೋಧನಾ ಸಮುಚಿತ ಆಧಾರ ತಯಾರಿಸಿಕೊಂಡಿರುತ್ತಾರೆ. ನಂತರ ರಸ್ತೆಯಲ್ಲಿ ಬರುತ್ತಿದ್ದ ದ್ವಿಚಕ್ರ ವಾಹನವನ್ನು ತಡೆದು ನಿಲ್ಲಿಸಿ ನೊಡಲಾಗಿ ಕಪ್ಪು ಬಣ್ಣದ ಹಿರೋ ಸ್ಪಂಡರ್ ಪ್ಲಸ್ ಅದರ ನೊಂದಣಿ ನಂ.ಎಪಿ-22 ಎಪಿ-6186 ಇರುವುದು ಕಂಡುಬಂದಿರುತ್ತದೆ. ನಂತರ ಪರಿಶೀಲನೆ ಮಾಡಲಾಗಿ ಬೈಕಿನಲ್ಲಿ 04 ಪ್ಲಾಸ್ಟಿಕ್ ಕವರುಗಳಲ್ಲಿ ತಲಾ 2 ರಂತೆ ಒಟ್ಟು 08 ಲೀ. ಕಳಬೆರಕೆ ಸೇಂದಿ ಇರುವುದು ಕಂಡುಬಂದಿರುತ್ತದೆ. ಬೈಕ್ ಚಾಲಕನ ಹೆಸರು ಕೇಳಲಾಗಿ ಮಲ್ಲಿಕಾರ್ಜುನ ತಂದೆ ದೇವಿಂದ್ರಪ್ಪ, ಸಾಃ ದೇವನಹಳ್ಳಿ ಎಂದು ತಿಳಿಸಿದ್ದರು. ಆರೋಪಿ ಮಾರಾಟದ ಉದ್ದೇಶಕ್ಕಾಗಿ ಆಂದ್ರ ಪ್ರದೇಶ ರಾಜ್ಯದಿಂದ ಸೇಂದಿ ತಂದಿರುವುದಾಗಿ ತಿಳಿಸಿದ್ದರು. ನಂತರ ಸೇಂದಿಯನ್ನು ವಶಕ್ಕೆ ಪಡೆದು ಆ ಪೈಕಿ ಒಂದು ಲೀಟರನ್ನು ಒಂದು ಪ್ಲಾಸ್ಟಿಕ್ ಬಾಟಲಿಯಲ್ಲಿ ಮಾದರಿಯಾಗಿ ತೆಗೆದುಕೊಂಡಿದ್ದೆವು. ಸ್ಥಳದಲ್ಲಿ ಮಃ 3.00 ರಿಂದ 4.00 ಗಂಟೆ ವರೆಗೆ ಪಂಚನಾಮೆ ಮಾಡಿದ್ದೆವು. ಆರೋಪಿ ಹಾಗೂ ವಾಹನ ಮತ್ತು ಮುದ್ದೆ

ಮಾಲಿನೊಂದಿಗೆ ಕಚೇರಿಗೆ ಬಂದು ಚಾಸಾಃ 1 ರವರು ಸರಕಾರದ ಪರವಾಗಿ ದೂರು ದಾಖಲಿಸಿಕೊಂಡಿದ್ದರು.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಆತ ಸೇಂದಿ ಸಾಗಾಟ ಮಾಡುತ್ತಿದ್ದ ವ್ಯಕ್ತಿ ಆಗಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಒಂದು ಖಾಲಿ ಪ್ಲಾಸ್ಟಿಕ್ ಬಾಟಲಿಯನ್ನು ನೋಡಿ ಅದು ಮಾದರಿ ಸೇಂದಿ ಬಾಟಲಿ ಆಗಿರುತ್ತದೆ ಎಂದು ನುಡಿದಿದ್ದು, ಸದರಿ ಬಾಟಲಿಯನ್ನು ಮು.ಮಾ 1 ಎಂದು ಗುರುತಿಸಲಾಯಿತು.

ಪಂಚನಾಮೆಯನ್ನು ನಿಪಿ-1 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಜಿ.ಆರ್ ವಕೀಲರಿಂದಃ</u>

ನಾವು ಯಾದಗಿರಿ ಕಚೇರಿಯಲ್ಲಿ ಇದ್ದಾಗ ಚಾಸಾಃ 1 ರವರು ನನ್ನನ್ನು ಕರೆದು ತಮಗೆ ಬಂದ ಮಾಹಿತಿಯನ್ನು ತಿಳಿಸಿದ್ದರು. ಮಾಹಿತಿ ಚಾಸಾಃ 1 ರವರಿಗೆ ಬಂದಿತ್ತು. ಮಃ 1.30 ಗಂಟೆಗೆ ಚಾಸಾಃ 1 ರವರು ನನಗೆ ಮಾಹಿತಿ ತಿಳಿಸಿದ್ದರು. ನಂತರ 55 ನಿಮಿಷಗಳಲ್ಲಿ ನಾವು ಗುನ್ನೆಜಾಗಕ್ಕೆ ಹೋಗಿದ್ದೆವು. ನಾವು ಗುನ್ನೆಜಾಗಕ್ಕೆ ಹೋದಾಗ ಮಃ 2.40 ಗಂಟೆ ಆಗಿತ್ತು. ಮಃ 1.45 ಗಂಟೆಗೆ ನಾವು ಕಚೇರಿಯಿಂದ ಹೊರಟಿದ್ದೆವು. ನಮ್ಮ ಕಚೇರಿಯಿಂದ ಗುನ್ನೆಜಾಗ ಅಂದಾಜು 50 ಕಿಮೀ ದೂರ ಇದೆ.

ಗುನ್ನೆಜಾಗದಲ್ಲಿ ಸುಮಾರು 2-3 ವಾಹನಗಳನ್ನು ತಪಾಸಣೆ ಮಾಡಿದ್ದೆವು. ಗುನ್ನೆಜಾಗದಲ್ಲಿ ಸಾಕಷ್ಟು ಜನಸಂಚಾರ ಇರುತ್ತದೆ ಎಂದರೆ ಸರಿ. ಚಾಸಾಃ 1 ರವರು ಸ್ಥಳದಲ್ಲಿ ಇದ್ದ ಜನರನ್ನು ಪಂಚರಾಗುವಂತೆ ಕೇಳಿಕೊಂಡಿದ್ದರು. ಎಷ್ಟು ಜನರನ್ನು ಕೇಳಿದ್ದರು ಎಂಬುದು ನನಗೆ ಗೊತ್ತಿಲ್ಲ. ನಾನು ಸ್ಥಳದಲ್ಲಿ ಚಾಸಾಃ 1 ರವರೊಂದಿಗೆ ಇದ್ದೆನು ಎಂದರೆ ಸರಿ.

ಬೈಕಿನಲ್ಲಿ ಆರೋಪಿ ಒಬ್ಬ ಮಾತ್ರ ಬರುತ್ತಿದ್ದನು. ಆರೋಪಿಗೆ ಬೈಕ್ ಚಾಲನೆ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ಬೈಕಿನ ಪೆಟ್ರೋಲ್ ಟ್ಯಾಂಕಿನ ಮೇಲೆ ಪ್ಲಾಸ್ಟಿಕ್ ಕ್ಯಾರಿ ಬ್ಯಾಗಿನಲ್ಲಿ ಸೇಂದಿ ಪ್ಯಾಕೇಟುಗಳು ಇದ್ದವು. ಪ್ಲಾಸ್ಟಿಕ್ ಕ್ಯಾರಿಬ್ಯಾಗನ್ನು ಸಹ ಜಪ್ತಿ ಮಾಡಿಕೊಂಡಿದ್ದೆವು. ಪಂಚನಾಮೆಯನ್ನು ಚಾಸಾಃ 1 ರವರು ಬರೆದಿರುತ್ತಾರೆ. ಬೈಕ್ ಬರುವಕ್ಕಿಂತ ಮೊದಲು ಚಾಸಾಃ 1 ರವರು ಶೋಧನಾ ಪತ್ರ ತಯಾರಿಸಿಕೊಂಡಿದ್ದರು. ಬೈಕ್

ಜಲಾಲಪೂರ ಕಡೆಯಿಂದ ಬರುತ್ತಿತ್ತು. ಸದರಿ ವಿಷಯವನ್ನು ಪಂಚನಾಮೆಯಲ್ಲಿ ನಮೂದು ಮಾಡಿಲ್ಲ.

ನಾವು ಸ್ಥಳಕ್ಕೆ ಹೋಗಿಲ್ಲ, ಸ್ಥಳದಲ್ಲಿ ಪಂಚನಾಮೆ ಮಾಡಿಲ್ಲ ಹಾಗೂ ಯಾವುದೇ ವಸ್ತು ಜಪ್ತಿ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಮು.ಮಾಲಿಗೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಇಲಾಖಾ ಅಂಕಿ-ಅಂಶಗಳಿಗೊಸ್ಕರ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಃ ಇರುವುದಿಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ